ವಿ. ಗೋವಿಂದಾಚಾರಿ, ಮೈಸೂರು

ಸೋಪನ್ನು ಮನೆಯವರೆಲ್ಲ ಬಳಸಿದರೂ ಜಾಹೀರಾತಿನಲ್ಲಿ ಹೆಣ್ಣೇ ಏಕೆ?



ಇತರರು ಚೆನ್ನಾಗಿರಲೆಂದು ಅವಳೂ ಸೋಪಿನಂತೆ ತನ್ನ ಜೀವ ಸವೆಸುವುದರಿಂದ.

ಡಾ. ವಿ. ಪುಗಳೇಂದಿ, ಬಳ್ಳಾರಿ

ಪುರಾಣ ಕಾಲದ ಮದುವೆಗೂ, ಕೊರೊನಾ ಕಾಲದ ಮದುವೆಗೂ ಏನು ವ್ಯತ್ಯಾಸ ಗುರು?

ಆಗ ಬಂಧುಮಿತ್ರರು; ಈಗ ಮಿತ್ರರು ಬಂದ್.

ರವಿ ಎಂ. ಪೈ, ಹೊನ್ನಾವರ

ಹಕ್ಕು ಮೊದಲೋ, ಕರ್ತವ್ಯ ಮೊದಲೋ?

ಹಕ್ಕೇ. ಹಲ್ಲು ಹುಟ್ಟುವುದಕ್ಕೆ ಮುಂಚಿನದೆಲ್ಲ ಹಕ್ಕು. ನಂತರವೇ ಉಜ್ಜಿಕೊಳ್ಳುವ ಕರ್ತವ್ಯ ಶುರು.

ಆರ್. ಮಧುಸೂದನ್, ಹಾಸನ

ಸತ್ತವರ ಫೋಟೊವನ್ನು 'ರಸ್ತೆಯಲ್ಲಿ ಹಾಕಿ ಮತ್ತೆ ಹುಟ್ಟಿ ಬಾ' ಎನ್ನುವುದೇಕೆ?

ಮತ್ತೆ ಬೀದಿಗೆ ಬೀಳಿಸಲು ಯತ್ನಿಸುತ್ತೇವೆ ಎಂಬ ಆಶ್ವಾಸನೆಯದು.

ಬಿ. ಚಂದ್ರೇಗೌಡ, ಬೆಂಗಳೂರು

ಹೆಲ್ಮೆಟ್‌ಗೂ, ಹೆಂಡತಿಗೂ ಏನು ವ್ಯತ್ಯಾಸ?



ಹೆಲ್ಮೆಟ್ಟನ್ನು ಯಾವುದೇ ತಕರಾರಿಲ್ಲದೆ ಬದಲಾಯಿಸಬಹುದು.

ಮುರಲೀಧರ ಕುಲಕರ್ಣಿ, ಬೀದರ್

ಜನಸೇವೆ ಮಾಡುತ್ತೇವೆ ಎನ್ನುವವರು ಪಂಚತಾರಾ ಹೋಟೆಲಿನಲ್ಲಿ ಮೌಜುಮಸ್ತಿ ಮಾಡುತ್ತಿರುವುದು ಸರಿಯೆ?

ಅವರ ಅಂತಸ್ತಿಗೆ ಅದೇ ಸರಿಯಂತೆ. ಹದ್ದುಗಳಿಗೆ ಕೋಡುಗಲ್ಲೇ ಡೈನಿಂಗ್ ಟೇಬಲ್.

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ

ಮನೆಗೆ ಕಾಲಿಟ್ಟವಳು ಮರಕೋತಿಯಾಗಿಸುವುದೇಕೆ?

ಇವಳ ಬೇಡಿದ್ದನ್ನೆಲ್ಲ ಅವನು 'ಕೊಂಬೆ', 'ಕೊಂಬೆ' ಎಂದು ಹಾರಲೆಂದು.

ಎಂ.ಎ. ಕುಮಾರ್, ಬೆಂಗಳೂರು

ಒಬ್ಬ ಸಾಮಾನ್ಯ ಮನುಷ್ಯ ದೇವಮಾನವ ಅನ್ನಿಸಿಕೊಳ್ಳುವುದು ಹೇಗೆ?

ತನ್ನದೇ ಪೀಠ, ಆಶ್ರಮ ಕಟ್ಟಿಕೊಂಡು ತಾನು ಆಚರಿಸದ್ದನ್ನೆಲ್ಲ ಬೋಧಿಸಲು ಆರಂಭಿಸಿದರೆ ಸಾಕು.

ನರಸಿಂಹ ಪೈ, ಕಾಸರಕೋಡ

ಪತ್ರಿಕಾ ಮಾಧ್ಯಮ ಸಮಾಜದ ಮೂರನೇ ಕಣ್ಣು. ಏಕೆ?

ಸಮಾಜದ್ರೋಹಿ ಕಾಮಣ್ಣಗಳ ಕಡೆ ಕಿಡಿನೋಟ ಬೀರುವುದರಿಂದ.

ಬಿ. ಬೋರೇಗೌಡ, ತಿರುಮಲನಗರ

ಜ್ಞಾನ ದೊಡ್ಡದೋ, ಹಣ ದೊಡ್ಡದೋ ಗುರುದೇವಾ?

ಹಣವನ್ನು ಹೇಗೆ ಬಳಸಬೇಕೆಂಬ ಜ್ಞಾನ ದೊಡ್ಡದು.

ಮೋಹನ್ ಟೈಲರ್, ಬೆಂಗಳೂರು

ಸತ್ಯ ಕಹಿ, ಸುಳ್ಳು ಸಿಹಿ ಅಂತಾರಲ್ಲ, ನೀವು ಎಂದಾದರೂ ರುಚಿ ನೋಡಿದ್ದೀರಾ ಗುರುಗಳೇ?

ಹಬ್ಬದಂದು 'ಡ್ರೆಸ್ ಇನ್ನೂ ರೆಡಿಯಾಗಿಲ್ಲ' ಎಂದು ಟೈಲರ್ ಕೈಯಾಡಿಸಿದಾಗ ಕಹಿ ಅನಿಸಿತ್ತಲ್ಲ.

ಹರಿತಸ, ಬೆಂಗಳೂರು

ಹಾಸ್ಯ ಮತ್ತು ಸಂಗೀತದ ಉಗಮ ಎಂದಾಯಿತು ರಾಮ್‌ಜೀ?

ಕ್ರಮವಾಗಿ ವಾಯುವಿನ ಚಲನೆ ಆರಂಭವಾದಂದು, ಬುದ್ಧಿಗೆ ಬಲ ಬಂದಂದು.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು

ಹೆಣ್ಣಿನ ಪೋನಿಟೈಲ್ ಗಂಡಿಗೆ ಬಂದಿದೆ. ಆದರೆ ಆ ಪೋನಿಟೈಲಲ್ಲಿ ಹೂ ಇಲ್ಲವಲ್ಲಾ...?

ಕಿವಿಯ ಮೇಲೆ ಇದೆಯಂತೆ ನೋಡಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಝೀರೋ ಹಂತ ತಲುಪಿದ್ದ ಕೊರೊನ ಮತ್ತೆ ವೇಗವಾಗಿ ಹರಡಲು ಮುಖ್ಯ ಕಾರಣ?

ಹೀರೋ ತರಹ ಸ್ವೇಚ್ಛೆಯಿಂದ ಅಲೆದಾಡಿದ ಲಜ್ಜಾಹೀನ ಮೂರ್ಖರೇ.

## ಬಹುಮಾನಿತ ಪ್ರಶ್ನೆ

ಕರಿಯಪ್ಪ, ಕಲಬುರ್ಗಿ

ನೀವು ಪರಿವಾರದವರಾ ಅಥವಾ ಸಂಘದವರಾ?

ನಿಮ್ಮ ಮಟ್ಟಿಗೆ ಗುರು'ವಾರದವರು'; ಮಿಕ್ಕಂತೆ ಸತ್'ಸಂಗದವರು'.

ವಿ. ಹೇಮಂತಕುಮಾರ್, ಬೆಂಗಳೂರು

ಮದುವೆ ಆಗಿರುವ ಗಂಡಸರು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬಹುದಾ ರಾಂಜಿ?

ಖಂಡಿತ– ಹೆಂಡತಿಯ ಅನುಮತಿ ಪಡೆದು.

ಸುಲೋಚನ ಜೆ. ರಾವ್, ಬೆಂಗಳೂರು

ನಾನು ದೇಶಕ್ಕೇ ಮಾದರಿಯಾಗಿ ನಿಲ್ಲಬೇಕೆಂದಿದ್ದೇನೆ. ಎಲ್ಲಿಂದ, ಹೇಗೆ ಪ್ರಾರಂಭಿಸಲಿ?

ಮನೆಯಲ್ಲೇ. ಎಲ್ಲಕ್ಕೂ ಪ್ರಧಾನಿಯೇ ಕಾರಣವೆನ್ನದೆ 'ನನ್ನ ಕರ್ತವ್ಯ ನಿಭಾಯಿಸುತ್ತೇನೆ' ಎಂಬ ಘೋಷದೊಂದಿಗೆ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಕವಿಗಳು ಹೆಣ್ಣನ್ನೇ ತಮ್ಮ ಕಾವ್ಯಗಳಲ್ಲಿ ಬಿಂಬಿಸುವುದು ಏಕೆ?



ಡ್ರೆಸ್ ವಿವರಕ್ಕಾಗಿ ಹೆಣ್ಣೂ, ಅಡ್ರೆಸ್ ವಿವರಕ್ಕಾಗಿ ಗಂಡೂ ಓದಿಯೇ ಓದುವರೆಂದು.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ಸಿನಿಮಾ 3 ಗಂಟೆಯಲ್ಲಿ ಮುಗಿಯುತ್ತದೆ. ಧಾರಾವಾಹಿ 3 ವರ್ಷವಾದರೂ ಮುಗಿಯುವುದಿಲ್ಲವಲ್ಲಾ...?

ಗುಣಪ್ರಭಾವ. ಸಿನಿಮಾ ನೇಯ್ದ ಚಾದರ; ಧಾರಾವಾಹಿ ಸಿಕ್ಕುಸಿಕ್ಕಾಗಿರುವ ಕಸೂತಿ ದಾರದ ಉಂಡೆ.

ನಾರಾಯಣ ಯಾಜಿ, ಶಿರಾಲಿ

ಕೊರೊನಾ ಹಾವಳಿಯಿಂದ 'ದಾನಧರ್ಮ' ಜಾಸ್ತಿ ಆಗ್ತಿರೋದು ಸಂತೋಷಕರ. ಏನಂತೀರಿ?

ನಿಜ. ಸಾವಿನಿಂದ ಪ್ರಚೋದಿತವಾದ ಈ ಸುಕಾರ್ಯವನ್ನು 'ಯಮನ್ ಕಲ್ಯಾಣ್' ಅನ್ನಬಹುದೇನೋ.

■ ರಾಮ್